ಅಂದಿನ ಮನೆಗಳಲ್ಲಿ ಹಾಗೆಯೇ. ಮನೆಯ ಜಗುಲಿಗೂ ಅಡಿಗೆಮನೆಗೂ ತುಂಬಾ ದೂರ! ಜಗುಲಿಯಲ್ಲಿ ನಿಂತು ಕೂಗಿದರೂ ಅಡಿಗೆಮನೆಗೆ ಕೇಳದು. ಜಗುಲಿಯಿಂದ ನಡುಮನೆ ಚೌಕಿಗಳನ್ನು ದಾಟಿ ಒಳಗೆ ಹೋಗಲು ಹಗಲಿನಲ್ಲಿಯೂ ನಾವು ಮಕ್ಕಳು ಹೆದರುತ್ತಿದ್ದೆವು. ಅದಕ್ಕೆ ಕಂಡುಕೊಂಡ ಉಪಾಯವೆಂದರೆ ಜಗುಲಿಯಿಂದ ಪ್ರಧಾನಬಾಗಿಲು ದಾಟಿ ಒಳಗೆ ಹೆಜ್ಜೆಯಿಟ್ಟೊಡನೆ ಆಚೆ ಈಚೆ ನೋಡದೆ ಹಿತ್ತಲ ಕಡೆವರೆಗೆ ಒಂದೇ ಓಟಕ್ಕೆ ಓಡಿಬಿಡುವುದು! ಮತ್ತೆ ಆ ಹೆದರಿಕೆಯ ಕೇಂದ್ರಬಿಂದು ಕಪ್ಪಡಿಗೆಮನೆಯೇ ಆಗಿತ್ತು. ರಾಜ್ಯಕ್ಕೆಲ್ಲಾ ಬೆಳಕು ಕೊಡುವ ಶರಾವತಿ ಅಣೆಕಟ್ಟೆಯ ಹಿನ್ನೀರ ತಟದಲ್ಲೇ ಇದ್ದರೂ ಆಗಿನ್ನೂ ನಮ್ಮೂರಿಗೆ ವಿದ್ಯುತ್ ಬಂದಿರಲಿಲ್ಲ. ಸಂಜೆಯಾದೊಡನೆ ಜಗುಲಿಯ ಮಧ್ಯದಲ್ಲೊಂದು ಲ್ಯಾಂಪು ಮಂದ ಬೆಳಕು ಬೀರುತ್ತಾ ತೂಗಾಡುತ್ತಿರುತ್ತಿತ್ತು. ಅಲ್ಲೊಂದು ಇಲ್ಲೊಂದು ಹಚ್ಚಿಟ್ಟಿರುತ್ತಿದ್ದ ಲಾಟೀನುಗಳು. ಅಡಿಗೆಮನೆಯಲ್ಲಿ ಹೊಗೆ ಕಾರುತ್ತಾ ಉರಿಯುವ ಚಿಮಣಿ ದೀಪ. ಜಗುಲಿಯ ಲ್ಯಾಂಪಿನ ಬೆಳಕಿನಲ್ಲಿ ಬರೆಯುತ್ತಾ ಕೂತಿರುತ್ತಿದ್ದ ನಾವು ಒಳಗಿನಿಂದ ಊಟಕ್ಕೆ ಕರೆದೊಡನೆ ಅಜ್ಜ ಅಪ್ಪಂದಿರ ಬೆನ್ನು ಹಿಡಿದು ಕಪ್ಪಡಿಗೆಮನೆಯ ಕಡೆ ತಿರುಗಿಯೂ ನೋಡದೆ ಒಳಗೆ ಹೋಗುತ್ತಿದ್ದೆವು. ರಾತ್ರಿ ಪ್ರತೀಸಲ ಒಳಗೆ ಹೊರಗೆ ಓಡಾಡುವಾಗಲೂ ಯಾರದ್ದಾದರೂ ಜೊತೆ ಬೇಕೇ ಬೇಕಾಗಿತ್ತು.

ಈ ಕಪ್ಪಡಿಗೆಮನೆಯಲ್ಲಿ ಒಬ್ಬ ಬಿಳೀ ಕೂದಲಿನ ರಾಕ್ಷಸಿ ಇದ್ದಾಳೆಂದೂ, ಮಕ್ಕಳು ಹಟ ಮಾಡಿದರೆ ಅವರನ್ನು ಕಪ್ಪಡಿಗೆಮನೆಯಲ್ಲಿ ಕೂಡಿ ಹಾಕುತ್ತೇವೆಂದೂ ಮನೆಯ ದೊಡ್ಡವರು ಹೆದರಿಸುತ್ತಿದುದೇ ನಮ್ಮ ಭಯಕ್ಕೆ ಕಾರಣವಾಗಿತ್ತು. ಎಷ್ಟೇ ಹಟಮಾಡಿ ಅಳುತ್ತಿದ್ದರೂ ಕಪ್ಪಡಿಗೆಮನೆಯ ಹೆಸರು ಹೇಳಿದ ಕೂಡಲೇ ನಮ್ಮ ಅಳು ಹಟ ನಿಂತು ಗಪ್ ಚುಪ್ ಆಗಿಬಿಡುತ್ತಿತ್ತು. ಅ ರಾಕ್ಷಸಿಗೆ ನಾವು ಬಿಳಿಮಂಡೆ ಮುದುಕಿ ಎಂದೇ ಕರೆಯುತ್ತಿದ್ದೆವು. ನಿಜವಾಗಿ ಅಲ್ಲಿ ಬಿಳಿಮಂಡೆ ಮುದುಕಿ ಇದ್ದಾಳೋ ಇಲ್ಲವೋ ಎಂದು ನೋಡುವ ಧೈರ್ಯ ಯಾರಿಗೂ ಇರಲಿಲ್ಲ.

ಸದಾ ಕತ್ತಲು ಕವಿದುಕೊಂಡು ನಿಗೂಢವಾಗಿರುತ್ತಿದ್ದ ಕಪ್ಪಡಿಗೆಮನೆ ವರ್ಷದಲ್ಲಿ ನಾಲ್ಕು ದಿನ ಮಾತ್ರ ಬೆಳಕಿಗೆ ತೆರೆದು ಕೊಳ್ಳುತ್ತಿತ್ತು. ಅದು ಚೌತಿ ಹಬ್ಬದ ಸಮಯದಲ್ಲಿ. ಆಗ ಗೌರೀ ಗಣೇಶರ ವ್ರತ ಇರುತ್ತಿದ್ದ ಕಾರಣ ದೇವರ ಒಳದಲ್ಲಿ ಇಡೀ ಹಗಲು ಮತ್ತು ರಾತ್ರಿ ಗ್ಯಾಸ್ ಲೈಟ್ ಅಂದರೆ ಪೆಟ್ರೋಮ್ಯಾಕ್ಸ್ ದೀಪವನ್ನು ಹಚ್ಚಿಡಲಾಗುತ್ತಿತ್ತು. ಸುಂಯ್ ಎಂದು ಶಬ್ದ ಮಾಡುತ್ತಾ ಬೆಳಗುತ್ತಿದ್ದ

